**ದಿನಾಂಕ: 20-11-2025 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ** ಪಾಟೀ **ಸವಾಲು:- ಪ್ರತಿವಾದಿಯ** ಪರ **ಶ್ರೀ. ಎಂ.ವಿ.ಎಸ್.** ವಕೀಲರಿಂದ:-

7. ನೀವು ಏನೆಂದು ದಾವೆ ಹೂಡಿರುತ್ತೀರಿ ಎಂದರೆ ಸಾಕ್ಷಿಯು ನಮ್ಮದು ಮನೆ ಬೇಕು ಎಂದು ದಾವೆ ಹೂಡಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಮನೆ ಯಾರ ಬಳಿ ಇರುತ್ತದೆ ಎಂದರೆ ಸಾಕ್ಷಿಯು 1ನೇ ಪ್ರತಿವಾದಿ ಗೋವಿಂದಯ್ಯನವರ ಬಳಿ ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ಗೋವಿಂದಯ್ಯನವರ ಸ್ವಾಧೀನದಲ್ಲಿರುವಂತಹ ಮನೆ ಎಷ್ಟು ಅಡಿಗಳು ಇವೆ ಎಂದರೆ ಸಾಕ್ಷಿಯು ಪೂರ್ವ -ಪಶ್ಚಿಮ 51 ಅಡಿಗಳು, ಉತ್ತರ- ದಕ್ಷಿಣ 34 ಅಡಿಗಳು ಇದೆ ಎಂದು ನುಡಿಯುತ್ತಾರೆ.ಸದರಿ ಸ್ವತ್ತಿನ ಚಕ್ಕುಬಂದಿ ಪೂರ್ವಕ್ಕೆ ಸರ್ಕಾರಿ ರಸ್ತೆ, ಪಶ್ಚಿಮಕ್ಕೆ ಖಾಲಿ ಸೈಟ್, ಉತ್ತರಕ್ಕೆ ವೆಂಕಟಾಚಲಯ್ಯನವರ ಮನೆ ಮತ್ತು ದಕ್ಷಿಣಕ್ಕೆ ಗೌರಮ್ಮನವರ ಮನೆ ಎಂದು ನುಡಿಯುತ್ತಾರೆ. ಸದರಿ ಮನೆ ಎಂತಹ ಮನೆ ಎಂದರೆ ಸಾಕ್ಷಿಯು ಮಂಗಳೂರು ಎಂಚಿನ ಮನೆ ಹಾಗೂ ಮುಂದಕ್ಕೆ ಶೀಟ್ ಮನೆ ಎಂದು ನುಡಿಯುತ್ತಾರೆ. ನೀವು ವಾಸ ಮಾಡುತ್ತಿರುವ ಮನೆಯ ವಿಸ್ತೀರ್ಣ ಹಾಗೂ ಚಕ್ಕುಬಂದಿ ಏನು ಎಂದರೆ ಸಾಕ್ಷಿಯು ಪೂರ್ವ -ಪಶ್ಚಿಮ 51 ಅಡಿಗಳು, ಉತ್ತರ-ದಕ್ಷಿಣ 34 ಅಡಿಗಳು ಇದೆ ಎಂದು ನುಡಿಯುತ್ತಾರೆ. ಸದರಿ ಸ್ವತ್ತಿನ ಚಕ್ಕುಬಂದಿ ಪೂರ್ವಕ್ಕೆ ಸರ್ಕಾರಿ ರಸ್ತೆ, ಪಶ್ಚಿಮಕ್ಕೆ ಗೌರಮ್ಮನವರ ಮನೆ ಜಾಗ, ಉತ್ತರಕ್ಕೆ ಹುಲಿನಂಜಯ್ಯ ಹಾಗೂ ಗಂಗಮ್ಮನವರ ಮನೆ ಮತ್ತು ದಕ್ಷಿಣಕ್ಕೆ ಮಾಸ್ಟರ್ ಚಿಕ್ಕಣ್ಣನವರ ಜಮೀನು ಎಂದು ನುಡಿಯುತ್ತಾರೆ. ಈಗ ಹೇಳಿರುವ ಜಮೀನಿನಲ್ಲಿ ನೀವು ವಾಸ ಇರುತ್ತೀರೀ ಎಂದರೆ ಸಾಕ್ಷಿಯು ಅದು ಗೌರಮ್ಮನವರ ಮನೆ ಎಂದು ನುಡಿಯುತ್ತಾರೆ. ಗೌರಮ್ಮ ಯಾರು ಎಂದರೆ ಸಾಕ್ಷಿಯು ನನ್ನ ಹೆಂಡತಿ ಎಂದು ನುಡಿಯುತ್ತಾರೆ.

8. ಈ ದಾವೆಯನ್ನು ನೀವೆ ಹೂಡಿರುತ್ತೀರಾ ಅಥವಾ ಬೇರೆಯವರು ಹೇಳಿ ದಾವೆಯನ್ನು ಹೂಡಿರುತ್ತೀರಾ ಎಂದರೆ ಸಾಕ್ಷಿಯು ನಾನೇ ಹೂಡಿರುತ್ತೇನೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ಚಕ್ಕುಬಂದಿ ಏನು ಎಂದರೆ ಸಾಕ್ಷಿಯು ಪೂರ್ವಕ್ಕೆ ಸರ್ಕಾರಿ ರಸ್ತೆ, ಪಶ್ಚಿಮಕ್ಕೆ ಖಾಲಿ ಸೈಟ್, ಉತ್ತರಕ್ಕೆ ವೆಂಕಟಾಚಲಯ್ಯ ಹಾಗೂ ಗೋವಿಂದಯ್ಯನವರ ಮನೆ ಮತ್ತು ದಕ್ಷಿಣಕ್ಕೆ ಗೌರಮ್ಮನವರ ಮನೆ ಎಂದು ನುಡಿಯುತ್ತಾರೆ. ಈಗ ನೀವು ಮೇಲೆ ಹೇಳಿರುವ ಸ್ವತ್ತಿಗೆ ದಾವೆ ಹೂಡಿಲ್ಲ ಎಂದರೆ ಸರಿಯಲ್ಲ. ನೀವು ದಾವೆಯನ್ನು ಪೂರ್ವಕ್ಕೆ ಸರ್ಕಾರಿ ರಸ್ತೆ, ಪಶ್ಚಿಮಕ್ಕೆ ಖಾಲಿ ಸೈಟ್ ಮತ್ತು ಗೌರಮ್ಮನ ಮನೆ, ಉತ್ತರಕ್ಕೆ ಹುಲಿನಂಜಯ್ಯ ಮತ್ತು ಗಂಗಮ್ಮನವರ ಮನೆ ಮತ್ತು ದಕ್ಷಿಣಕ್ಕೆ ಚಿಕ್ಕಣ್ಣನವರ ಜಮೀನು ಈ ಮಧ್ಯೆ ಇರುವ ಜಾಗಕ್ಕೆ ದಾವೆ ಹೂಡಿರುತ್ತೀರಿ ಎಂದರೆ ಸರಿ. ಸಾಕ್ಷಿಯು ಮುಂದುವರಿದು ಹುಲಿನಂಜಯ್ಯನವರ ಮನೆಯ ಪಕ್ಕದ ಮನೆಗೆ ನಾನು ದಾವೆ ಹೂಡಿರುತ್ತೇನೆ ಎಂದು ನುಡಿಯುತ್ತಾರೆ. ಈ ದಾವಾ ಸ್ವತ್ತು ಮೂರು ಜನಕ್ಕೂ ಬಂದಿರುತ್ತದೆ ಎಂದು ನುಡಿಯುತ್ತಾರೆ. ನಿಮ್ಮ ವಾದ ಪತ್ರದಲ್ಲಿ ದಾವಾ ಸ್ವತ್ತು ಮೂರು ಜನಕ್ಕೂ ಸೇರಿದ್ದು ಎಂದು ಬರೆಸಿರುತ್ತೀರಾ ಎಂದರೆ ಸಾಕ್ಷಿಯು ಇಲ್ಲ ನನ್ನ ಸ್ವತ್ತಿಗೆ ನಾನು ದಾವೆಯನ್ನು ಹೂಡಿರುತ್ತೇನೆ ಎಂದು ನುಡಿಯುುತ್ತಾರೆ. ದಾವಾ ಸ್ವತ್ತು ಮೂರು ಜನಕ್ಕೂ ಸೇರಿದ್ದು, ಆಗಾಗಿ ಈ ದಾವೆ ಊರ್ಜಿತವಲ್ಲ ಎಂದರೆ ಸರಿಯಲ್ಲ. ನೀವು ಮೂರು ಜನ ಅಲ್ಲದೆ ನಿಮ್ಮ ತಂಗಿ ಅಲುಮೇಲಮ್ಮ ರವರಿಗೂ ಸಹ ಈ ಸ್ವತ್ತಿನಲ್ಲಿ ಹಕ್ಕು ಇದೆ ಎಂದರೆ ಸರಿಯಲ್ಲ. ದಾವಾ ಸ್ವತ್ತನಲ್ಲಿ ಯಾರು ಅನುಭೋಗದಲ್ಲಿ ಇದ್ದಾರೆ ಎಂದರೆ ಸಾಕ್ಷಿಯು 1ನೇ ಪ್ರತಿವಾದಿ ಗೋವಿಂದಯ್ಯ, ವೆಂಕಟಚಲಯ್ಯ ಹಾಗೂ ನಾರಾಯಣಪ್ಪರವರು ಇದ್ದಾರೆ ಎಂದು ನುಡಿಯುುತ್ತಾರೆ. ನಾರಾಯಣಪ್ಪ ಎಂದರೆ ನಾನೇ ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ಎಷ್ಟು ವರ್ಷಗಳಿಂದ ವಾಸ ಇದ್ದೀರಿ ಎಂದರೆ ಸಾಕ್ಷಿಯು ನಮ್ಮ ತಾತನ ಕಾಲದಿಂದಲೂ ವಾಸವಿದ್ದೇವೆ ಎಂದು ನುಡಿಯುತ್ತಾರೆ. ಈ ಮೂರು ಜನರೂ ಸೇರಿ ದಾವಾ ಸ್ವತ್ತಿನಲ್ಲಿ ಕಟ್ಟಡ ಕಟ್ಟಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎಂದು

ನುಡಿಯುತ್ತಾರೆ. ಆದ್ದರಿಂದ ನೀವು ಮೂರು ಜನ ಸಹ ಅದರ ಮಾಲೀಕರು ಎಂದರೆ ಸರಿ.

9. ಕುಟುಂಬದಲ್ಲಿ ಇನ್ನೂ ಭಾಗ ಆಗಿಲ್ಲ ಆದರೂ ಸಹ ನೀವು ಸುಳ್ಳು ದಾವೆಯನ್ನು ಹೂಡಿ, ಸುಳ್ಳು ವಿಭಾಗ ಪತ್ರವನ್ನು ಸೃಷ್ಟಿ ಮಾಡಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದದ್ದೀರಿ ಎಂದರೆ ಸರಿಯಲ್ಲ. ವಿಭಾಗ ಪತ್ರವನ್ನು ಸೃಷ್ಟಿ ಮಾಡಿರುತ್ತೀರಿ ಎಂದರೆ ಸಾಕ್ಷಿಯು 1ನೇ ಪ್ರತಿವಾದಿ ಸೃಷ್ಟಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಅಗಾಗಿ ನಿಪಿ-7 ಸೃಷ್ಟಿತ ದಾಖಲಾತಿ ಎಂದರೆ ಸರಿ. ನಿಪಿ-7 ಸೃಷ್ಟಿತ ದಾಖಲಾತಿಯ ಮೇಲೆ ಖಾತೆ ಆಗಿರುತ್ತದೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಅ.ಸಿ.ಜ. ಮತ್ತು ಜೆ.ಎಂ.ಎಫ್.ಸಿ. ಮಾಗಡಿ.**